ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

ನವೆಂಬರ್ 2023 ಸಂಪುಟ 19
ಸಂಚಿಕೆ 11
ಸಂಚಿಕೆ ಬೆಲೆ ರೂ. 1/-

# ಸ್ನೇಹ ಚಿಂತನೆ ಮಾಸ ಪತ್ರಿಕೆ



ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ
ವಾರ್ಷಿಕ ಕ್ರೀಡಾ ಕೂಟ ಉದ್ಘಾಟನಾ ಸಮಾರಂಭ



ಮಹಿಳಾ ವಿಭಾಗದ ವತಿಯಿಂದ ದಸರಾ ಆಚರಣೆ









Bangalore Bunts Sangha Participated
in World Bunts Meet at Udupi

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಭಾವಪೂರ್ಣ ಶ್ರದ್ಧಾಂಜಲಿ



## ದಿ. ಎಂ.ಜಿ. ಜಗನ್ನಿವಾಸ ರೈ

ಜನನ : 1943

ನಿಧನ : 2023

ನಿವೃತ್ತ ಅಡಿಷನಲ್ ಕಮಿಷನರ್ ಇನ್‌ಕಮ್‌ಟ್ಯಾಕ್ಸ್

ಬಂಟರ ಸಂಘ ಬೆಂಗಳೂರಿನ 80–81ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರು

ಜೀವನದಲ್ಲಿ ಶ್ರೇಷ್ಠವಾದ ಶಿಸ್ತು ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿದ ನಿಮ್ಮ ಅಗಲುವಿಕೆಯಿಂದ ನಮಗೆ ಅತೀವ ದುಃಖವನ್ನುಂಟುಮಾಡಿದೆ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,

ಪತ್ನಿ ಕಿರಣ್ ಜೆ. ರೈ

ಮಗಳು ಡಾ. ಜ್ಯುತಿಕ – ಅಳಿಯ ಡಾ. ಗೌರವ್ ಶೆಟ್ಟಿ

ಮಗ– ಜತಿನ್ ರೈ– ಸೊಸೆ ಶಿವಾಲಿ ಶೆಟ್ಟಿ

ಮೊಮ್ಮಕ್ಕಳು ಸಾನ್ವಿ, ತನಿಷಿ, ನೀವ್, ನ್ಯಾರ

ಮತ್ತು

ಕುಟುಂಬಸ್ಥರು

ADVT.

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 19** **NOVEMBER 2023** **ISSUE 11**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಸುಮ್ಮ ಸುಮ್ಮನೆ ಗಾಬರಿಯಾಗುವುದು | 5 |
| Tulu Nadu: A Tapestry of Culture, Language and Tradition | 6–7 |
| A Sweet Resolve For Your 'Sugar Problems' | 8–9 |
| A Report On Students Development Programme | 10 |
| ಬಂಟರ ಸಂಘ ಬೆಂಗಳೂರು–ಮಹಿಳಾ ವಿಭಾಗ–ದಸರಾ ಆಚರಣೆ | 11 |
| ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ ವರದಿ | 23–26 |

### <u>ಮುಖ ಪುಟ</u>

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ ಉದ್ಘಾಟನಾ ಸಮಾರಂಭ
ಮಹಿಳಾ ವಿಭಾಗದ ವತಿಯಿಂದ ದಸರಾ ಆಚರಣೆ
Bengalore Bunts Sangha Participated in World Bunts Meet at Udupi

# ಸಂಪಾದಕೀಯ



ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳುವಂತೆ 'ಅನ್ನಾದ್ ಭವಂತಿ ಭೂತಾನಿ'– ಎಲ್ಲಾ ಜೀವಿಗಳು ಅನ್ನದಿಂದ ವಿಕಾಸವಾಗುತ್ತದೆ. ಒಬ್ಬ ವ್ಯಕ್ತಿಯ ಹಸಿವನ್ನು ನೀಗಿಸುವುದು ಇಹ ಹಾಗೂ ಪರ ಲೋಕದಲ್ಲಿ ಉತ್ತಮ ಫಲವನ್ನು ತರುತ್ತದೆ. ಎಲ್ಲಾ ದೇವ ದೇವತೆಗಳು ಅನ್ನದಾನದಿಂದ ಸಂಪ್ರೀತರಾಗುತ್ತಾರೆ.

ಬೇರೆ ಯಾವುದೇ ದಾನಗಳಿಂದ ದಾನ ಸ್ವೀಕರಿಸುವವರಿಗೆ ತೃಪ್ತಿಯಾಗಲಾರದು. ಇನ್ನೂ ಬೇಕೆಂಬ ಹಂಬಲವು ಇದ್ದೇ ಇರುತ್ತದೆ. ಆದರೆ ಅನ್ನದಾನ ಸ್ವೀಕರಿಸಿದ ವ್ಯಕ್ತಿ ತನ್ನ ಹಸಿವು ನೀಗಿಸಿಕೊಂಡು ತೃಪ್ತನಾಗುತ್ತಾನೆ. ಸಮಾಜದಲ್ಲಿ ಅನೇಕರು ವಿವಿಧ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಅಂದುಕೊಂಡ ಕಾರ್ಯಗಳು ಯಶಸ್ವಿಯಾದರೆ ಸಂತಸ ಪಡುತ್ತಾರೆ. ಸತ್ಕಾರ್ಯಗಳು, ಪೂಜೆ, ಹೋಮ, ಹವನ, ದಾನ–ಧರ್ಮಗಳಂತಹ ಕಾರ್ಯಗಳು ಮಾಡಿದವರಿಗೂ, ಮಾಡಿಸಿದವರಿಗೂ ತೃಪ್ತಿ, ಸಂತೋಷ ನೀಡುತ್ತವೆ. ಆದರೆ ವಾಸ್ತವವಾಗಿ ಈ ಕಾರ್ಯ ಯಾರಿಗಾಗಿ ಮಾಡಿರುತ್ತೇವೆ ಅವರಿಗೆ ತೃಪ್ತಿಯಾಗಬೇಕು. ಆಗ ಮಾತ್ರ ಭಗವಂತನಿಗೆ ಮೆಚ್ಚುಗೆಯಾಗಲು ಸಾಧ್ಯ. ಇದನ್ನು ಅರ್ಥೈಸಿಕೊಳ್ಳದ ಅನೇಕರು ಲಕ್ಷಾಂತರ ಹಣ ವ್ಯಯಿಸಿದರೂ ಪ್ರಯೋಜನವಿಲ್ಲ.

ಒಮ್ಮೆ ಧರ್ಮರಾಯನು ದೇವತೆಗಳನ್ನು ಪ್ರಸನ್ನಗೊಳಿಸುವ ಉದ್ದೇಶದಿಂದ ಒಂದು ಯಜ್ಞವನ್ನು ಆಯೋಜಿಸುತ್ತಾನೆ. ಯಜ್ಞದಲ್ಲಿ ಅನೇಕರಿಗೆ ಅತ್ಯಮೂಲ್ಯ ದಾನ ಧರ್ಮಗಳನ್ನು ನೀಡಿ ಗೌರವಿಸುತ್ತಾನೆ. ಹಲವಾರು ಬಗೆಯ ಅಮೂಲ್ಯವಾದ ವಸ್ತುಗಳು, ಹಣ್ಣು ಹಂಪಲು, ಚಿನ್ನ, ಬೆಳ್ಳಿ, ಧವಸ ಧಾನ್ಯ ಹೀಗೆ ಬಗೆ ಬಗೆಯ ಸಾಮಾಗ್ರಿಗಳಿಂದ ಪೂರ್ಣಾಹುತಿ ನೀಡಿದರೂ ದೇವತೆಗಳು ಸಂತೃಪ್ತರಾಗುವುದಿಲ್ಲ. ಆಶ್ಚರ್ಯಚಕಿತನಾದ ಧರ್ಮರಾಯನು ಶ್ರೀಕೃಷ್ಣನಲ್ಲಿ, ನಮ್ಮ ಯಜ್ಞದಲ್ಲೇನು ಕೊರತೆಯಾಗಿದೆ ಮಾಧವ! ಎಂದು ಕೇಳುತ್ತಾನೆ. ಆಗ ಶ್ರೀಕೃಷ್ಣ ಹೇಳುತ್ತಾನೆ, "ಧರ್ಮರಾಜ, ನೀನು ಒಬ್ಬ ಬಡವನನ್ನು ಕರೆದು ಅವನಿಗೆ ಊಟ ಮಾಡಿಸು, ವ್ಯತ್ಯಾಸ ನಿನಗೇ ತಿಳಿಯುತ್ತದೆ" ಎಂದಾಗ ಧರ್ಮರಾಯನು ಬೀದಿಯಲ್ಲಿ ಸಾಗುತ್ತಿದ್ದ ಬಡವನನ್ನು ಕರೆದು ಗೌರವದಿಂದ ಊಟ ಬಡಿಸುತ್ತಾನೆ. ಆಗ ತೃಪ್ತರಾದ ದೇವತೆಗಳು ಆಕಾಶದಿಂದ ಘಂಟಾಘೋಷಗಳ ಮೂಲಕ ಆಶೀರ್ವದಿಸುತ್ತಾರೆ. ಅಚ್ಚರಿಗೊಂಡ ಧರ್ಮರಾಯನು ಮತ್ತೆ ಶ್ರೀಕೃಷ್ಣನಲ್ಲಿ "ಕೃಷ್ಣಾ ಈ ಬಡವ ಮಾಡಿದ ಊಟಕ್ಕೇನು ವಿಶೇಷ? ಎಂದು ಪ್ರಶ್ನಿಸುತ್ತಾನೆ. ಆಗ ಶ್ರೀ ಕೃಷ್ಣನು ಅರ್ಥಪೂರ್ಣವಾಗಿ ವಿವರಿಸುತ್ತಾನೆ. ರಾಜ ಮಹಾರಾಜರಿಗೆ, ಮಂತ್ರಿ ಮಹಾಶಯರಿಗೆ, ಬ್ರಾಹ್ಮಣರಿಗೆ, ಎಲ್ಲಾ ಕಡೆ ವಿವಿಧ ಸತ್ಕಾರ, ಗೌರವ ದಾನಾದಿಗಳು, ಭೂರಿ ಭೋಜನಗಳು ದೊರೆಯುತ್ತಿರುತ್ತವೆ. ಅದರ ಅಗತ್ಯವಿರದ ಅವರಿಗೆ ಇನ್ನಷ್ಟು ಆಸೆ ಬರಬಹುದೇ ವಿನಃ ತೃಪ್ತಿ ಉಂಟಾಗುವುದಿಲ್ಲ. ಆದರೆ ಆ ಬಡವನ ಊಟದಲ್ಲಿ ಧನ್ಯತೆ ಇತ್ತು, ಒಂದೊಂದು ಅಗುಳಿನಲ್ಲೂ ಅದರ ಸವಿಯಿತ್ತು, ಹೊತ್ತು ಊಟಕ್ಕೂ ಪರದಾಡುತ್ತಿದ್ದ ಅವನ ಒಂದು ಹೊತ್ತಿನ ಹಸಿವು ನೀಗಿದ ತೃಪ್ತಿ ಇತ್ತು. ಊಟದ ಬೆಲೆ, ಮಹತ್ವ ತಿಳಿದಿತ್ತು, ಮುಖದಲ್ಲೊಂದು ಧನ್ಯತಾ ಭಾವವಿತ್ತು. ಇದರಿಂದ ಆತ ತೃಪ್ತನಾದ, ತನ್ಮೂಲಕ ದೇವತೆಗಳೂ ತೃಪ್ತರಾದರು ಎನ್ನುತ್ತಾನೆ.

ಯಾವುದೇ ದಾನವಾದರೂ ಸತ್ಪಾತ್ರರಿಗೆ ಸಂದಾಗ ಅದರ ಫಲ ವಿಶೇಷವಾಗಿರುತ್ತದೆ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಗಣೇಶ ಚತುರ್ಥಿ, ನವರಾತ್ರಿ ಕಳೆದು ಈಗ ದೀಪಾವಳಿಯ ಸಂಭ್ರಮ. ದೀಪಾವಳಿ ಎಂದರೆ ಆಧ್ಯಾತ್ಮಿಕವಾಗಿ ಕತ್ತಲೆಯಿಂದ ಬೆಳಕಿನೆಡೆಗೆ, ಕೇಡಿನ ಮೇಲೆ ಶುಭದ ವಿಜಯವನ್ನು ಆಚರಿಸುವ ಹಬ್ಬ. ಅಮಾವಾಸ್ಯೆಯ ಹಿಂದಿನ ದಿನ ನರಕ ಚತುರ್ದಶಿಯಂದು ಶ್ರೀ ಕೃಷ್ಣ ನರಕಾಸುರನನ್ನು ಸಂಹರಿಸಿದ ದಿನ ಎಂದೂ, ಶ್ರೀ ರಾಮ ರಾವಣನನ್ನು ಗೆದ್ದು ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದ ಸಮಯವೆಂದೂ ದೀಪಾವಳಿ ಹಬ್ಬದ ಆಚರಣೆ ದೇಶದಾದ್ಯಂತ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಹಾಗಾಗಿ ಎಲ್ಲಾ ಕೆಟ್ಟದೆಂಬುದು ನಾಶವಾಗಿ ಶುಭದಿನಗಳು ಬರಲಿ, ಎಲ್ಲರಿಗೂ ಭಗವಂತನು ಸದ್ಬುದ್ಧಿ, ಸಮೃದ್ಧಿ ಕರುಣಿಸಲಿ ಎಂದು ಆಶಿಸೋಣ.

ಬೆಂಗಳೂರು ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದ ನವೀಕರಣದ ಕೆಲಸ ಬಹುತೇಕ ಮುಕ್ತಾಯಗೊಂಡಿದೆ. ಹೊಸ ಆಸನಗಳು, ಬೆಳಕಿನ ವ್ಯವಸ್ಥೆ, ಎಸಿ ಇತ್ಯಾದಿಗಳು ನವೀಕರಣಗೊಂಡಿವೆ. ಈ ಕೆಲಸ ಹಲವರ ಪ್ರಶಂಸೆಗೆ ಪಾತ್ರವಾಗಿದೆ. ಬಹಳ ಕಡಿಮೆ ಕಾಲಾವಕಾಶದಲ್ಲಿ ಈ ಕೆಲಸಗಳನ್ನು ಮಾಡಿ ಮುಗಿಸಿಕೊಟ್ಟ ಸಂಘದ ಪ್ರಾಜೆಕ್ಟ್ ಕಮಿಟಿಯ ಸಂಚಾಲಕರಾದ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ ಹಾಗೂ ಶ್ರೀ ಸತೀಶ್ ಕುಮಾರ್ ಶೆಟ್ಟಿ ಮತ್ತು ಸಂಘದ ಉಪಾಧ್ಯಕ್ಷರಾದ ಡಾ. ಜಗದೀಶ್ ಶೆಟ್ಟಿಯವರಿಗೆ ವಂದನೆಗಳು. ಹಾಗೆಯೇ ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರ ಸಹಕಾರ ಪ್ರಶಂಸನೀಯ. ಇನ್ನೂ ಹಲವಾರು ಕೆಲಸಗಳು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ 1 ಮತ್ತು 2ರಲ್ಲಿ ನಡೆಯುತ್ತಿವೆ.

ಮಂಕು ತಿಮ್ಮನ ಕಗ್ಗದಲ್ಲಿ ಹೇಳಿರುವಂತೆ–<br>
ಧರೆಯ ಬದುಕೇನದರ ಗುರಿಯೇನು ಫಲವೇನು?।<br>
ಬರಿಬಳಸು ಬಡಿದಾಟ ಬರಿ ಪರಿಭ್ರಮಣೆ॥<br>
ತಿರುತಿರುಗಿ ಹೊಟ್ಟೆ ಹೊರಕೊಳುವ ಮೃಗಖಗಕ್ಕಿಂತ।<br>
ನರನು ಸಾಧಿಪುದೇನು? – ಮಂಕು ತಿಮ್ಮ॥

ಈ ಪ್ರಪಂಚದಲ್ಲಿ ನಮ್ಮ ಜೀವನದ ಅರ್ಥ ಹಾಗೂ ಗುರಿ ಏನು? ಅದರ ಪ್ರತಿಫಲವೇನು? ಅದನ್ನು ಸಹಿಸಿಕೊಳ್ಳುವುದರಿಂದ ಆಗುವ ಲಾಭವೇನು? ನಾವು ಮಾಡುವ ಯಾವುದೇ ಕ್ರಿಯೆಯು ಅಂತಿಮ ಗುರಿಯತ್ತ ಒಂದು ಸುತ್ತು ಮಾತ್ರ. ಇದು ನಿರಂತರ ಹೋರಾಟ. ಆಹಾರಕ್ಕಾಗಿ ಅಲೆದಾಡುವ, ಅಲೆಮಾರಿ ಜೀವನ ನಡೆಸುವ ಪ್ರಾಣಿ ಪಕ್ಷಿಗಳೂ ನಮ್ಮನ್ನು ಹೋಲುವುದಿಲ್ಲವೇ? ಹಾಗಾದರೆ ಮನುಕುಲದ ವಿಶೇಷ ಸಾಧನೆ ಏನು?

ಯಾವುದೇ ಒಂದು ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡುವಾಗ ಮೊದಲು ಅದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮಲ್ಲಿ ಒಂದು ಗುರಿ ಇರಬೇಕು, ಅದಕ್ಕೆ ಪೂರಕವಾಗಿ ನಾವು ಕೆಲಸ ಮಾಡಬೇಕು. ಎಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಕೆಲವೊಂದು ಕಣ್ಣಿಗೆ ಕಾಣುವಂತಾಗಿರುತ್ತವೆ, ಇನ್ನು ಕೆಲವು ಕಾಣುವುದಿಲ್ಲ. ಆದರೆ ಕಣ್ಣಿಗೆ ಕಾಣದೇ ಇರುವ ಈ ಕೆಲಸಗಳು ಒಂದು ಸಂಸ್ಥೆಗೆ ಬಹು ಮುಖ್ಯವಾಗಿರುತ್ತವೆ.

ನಾವು ಬರೇ ಹೆಸರಿಗೋಸ್ಕರ ಕೆಲಸ ಮಾಡದೇ ಸಂಘದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಹೆಸರಿಗೋಸ್ಕರ, ಪ್ರಚಾರಕ್ಕಾಗಿ ನಾವು ಎಷ್ಟೇ ಸರ್ಕಸ್ ಮಾಡಿದರೂ ಜನರಿಗೆ ಅದು ಗೊತ್ತಾಗುವುದಿಲ್ಲ ಎಂದು ನಾವು ಅಂದುಕೊಂಡರೆ ಅದು ನಮ್ಮ ಮೂರ್ಖತನ. ಆದ್ದರಿಂದ ನಮ್ಮ ಆತ್ಮಸಾಕ್ಷಿಗೆ ಸರಿಯಾಗಿ, ಪಾರದರ್ಶಕವಾದ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡಬೇಕು. ಇದರಲ್ಲಿ ಯಾವ ಒಣಜಂಬವೂ ಇರಬಾರದು. ಏನೇ ಇರಲಿ, ನಮ್ಮ ಸಂಘ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಯಾವುದಾದರೂ ಮೋಸ, ವಂಚನೆ ಆಗಿದ್ದಲ್ಲಿ ಅದು ಖಂಡಿತವಾಗಿಯೂ ಹೊರಗೆ ಬಂದೇ ಬರುತ್ತದೆ.

ಪ್ರಸಕ್ತ ವಿದ್ಯಮಾನಗಳು ಒಂದು ಸಂಚಿಕೆ ಇದ್ದಂತೆ, ಹೊಸ ಸಂಚಿಕೆ ಬಂದೇ ಬರುತ್ತದೆ, ಬಿರುಗಾಳಿ, ಕಪ್ಪು ಮೋಡಗಳು ಹಾದು ಹೋಗಿ ಪ್ರಶಾಂತವಾದ ವಾತಾವರಣ ನಮ್ಮ ಸಂಘದಲ್ಲಿ ಬರುವಂತಾಗಲಿ ಎಂದು ಹಾರೈಸುತ್ತಾ ಮತ್ತೊಮ್ಮೆ ಸಂಘದ ಸರ್ವ ಸದಸ್ಯರಿಗೆ ದೀಪಾವಳಿ ಹಬ್ಬದ ಶುಭಾಶಯಗಳು.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
hegdemm@gmail.com

## ಗೌರವ ಕಾರ್ಯದರ್ಶಿಯವರ ವರದಿ



### ಸದಸ್ಯ ಬಾಂಧವರಿಗೆಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

ದಿನಾಂಕ 15.10.2023ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲಾ ಆವರಣದಲ್ಲಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಅಥ್ಲೆಟಿಕ್‌ನಲ್ಲಿ ಸಂಘದ ಸದಸ್ಯರು ಮತ್ತು ಅವರ ಮಕ್ಕಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕ್ರೀಡಾ ಕೂಟದ ಉದ್ಘಾಟನೆಯನ್ನು ವಿಶ್ವ ಕಿಕ್‌ಬಾಕ್ಸಿಂಗ್ ಚಾಂಪಿಯನ್ ಶ್ರೀ ಅನೀಶ್ ಶೆಟ್ಟಿಯವರು ನೆರವೇರಿಸಿದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದಂತಹ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಕಿರಣ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ನಿತ್ಯರಂಜನ್ ಹೆಗ್ಡೆ ಮತ್ತು ತಂಡಕ್ಕೆ ಅಭಿನಂದನೆಗಳು. ಕ್ರೀಡಾ ಕೂಟಕ್ಕೆ ಸಹಕರಿಸಿದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು IIರ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು. ಅಂದಿನ ಊಟದ ವ್ಯವಸ್ಥೆಯನ್ನು ಮಾಡಿದ ಶ್ರೀ ಮಂಜುನಾಥ ಹೆಗ್ಡೆಯವರಿಗೂ ಧನ್ಯವಾದಗಳು.

ದಿನಾಂಕ 21.10.2023ರಂದು ಮಹಿಳಾ ವಿಭಾಗದ ವತಿಯಿಂದ ದಸರಾ ಆಚರಣೆಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ ಮತ್ತು ತಂಡಕ್ಕೆ ಅಭಿನಂದನೆಗಳು.

ದಿನಾಂಕ 28.10.2023 ಮತ್ತು 29.10.2023ರಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ವತಿಯಿಂದ ನಡೆದ ವಿಶ್ವ ಬಂಟರ ಕ್ರೀಡಾಕೂಟ ಮತ್ತು ವಿಶ್ವ ಬಂಟರ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬೆಂಗಳೂರು ಬಂಟರ ಸಂಘವು ಭಾಗವಹಿಸಿದ್ದು, ಕಬಡ್ಡಿ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಪಡೆದಿರುವ ನಮ್ಮ ತಂಡಕ್ಕೆ ಅಭಿನಂದನೆಗಳು ಮತ್ತು ಕಬಡ್ಡಿ ತಂಡಕ್ಕೆ ಪ್ರಾಯೋಜಕತ್ವವನ್ನು ನೀಡಿದ ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರಿಗೆ ತುಂಬು ಹೃದಯದ ಧನ್ಯವಾದಗಳು. ಕ್ರೀಡಾ ತಂಡದ ನೇತೃತ್ವವನ್ನು ವಹಿಸಿದ ಶ್ರೀ ಕಿರಣ್ ಕುಮಾರ್ ಶೆಟ್ಟಿಯವರಿಗೂ ಅಭಿನಂದನೆಗಳು. ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈಯವರೊಂದಿಗೆ ಶ್ರೀ ಕಾರ್ತಿಕ್ ಶೆಟ್ಟಿಯವರ ನೇತೃತ್ವದ ತಂಡವು ತೃತೀಯ ಬಹುಮಾನವನ್ನು ಪಡೆದಿದ್ದು ಸಾಂಸ್ಕೃತಿಕ ಸ್ಪರ್ಧೆಯ ಎಲ್ಲಾ ಖರ್ಚುವೆಚ್ಚಗಳನ್ನು ಭರಿಸಿದ ಶ್ರೀ ಕಾರ್ತಿಕ್ ಶೆಟ್ಟಿಯವರಿಗೆ ತುಂಬು ಹೃದಯದ ಅಭಿನಂದನೆಗಳು.

ನಮ್ಮ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದ ನವೀಕರಣದ ಕೆಲಸವು ಪೂರ್ಣಗೊಂಡಿದೆ. ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

ದಿನಾಂಕ 18.11.2023ರಂದು ಸಂಜೆ 5.30ರಿಂದ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ದೀಪಾವಳಿಯನ್ನು ಆಚರಿಸಲಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ,
**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ

# ಸುಮ್ಮ ಸುಮ್ಮನೆ ಗಾಬರಿಯಾಗುವುದು



ಎ. ಕೃಷ್ಣಾನಂದ ಶೆಟ್ಟಿ

ಗಾಬರಿ ಆಗುವುದು ಮನುಷ್ಯನ ಸಹಜ ಗುಣ! ಯಾವುದೇ ವಿಚಾರ ವಿಷಯಗಳನ್ನು ಹಾಗೆಯೇ ಸುದ್ದಿಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಗಾಬರಿಗೆ ಒಳಗಾಗುವುದು ಸರಿ ಅಲ್ಲ. ಕೂಲಂಕುಷವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವುದು ಸೂಕ್ತ. ಒಮ್ಮೆಲೆ ಗಾಬರಿಗೊಳ್ಳುವುದು ಯಾ ಗಾಬರಿಪಡಿಸುವುದು ಪ್ರಾಣಕ್ಕೆ ಕುತ್ತು ಬರಲೂಬಹುದು. ಅಂದರೆ ಹೃದಯಾಘಾತಕ್ಕೂ ಕಾರಣ ಆಗಲೂಬಹುದು. ಅಂಜಿಕೆ, ಅಧೈರ್ಯತೆ ಹಾಗೂ ಕೇಳಿದ ಸುದ್ದಿಗಳನ್ನು ಜೀರ್ಣಿಸಿಕೊಳ್ಳುವಷ್ಟು ಶಕ್ತಿ–ಸಾಮರ್ಥ್ಯ ಇಲ್ಲದಿದ್ದಾಗ ದುರಂತಗಳಿಗೆ ಕಾರಣ ಆಗಲೂಬಹುದು. ಅವಕಾಶ ಸಿಕ್ಕಿರಲೂಬಹುದು. ನಾವು ಹೆಚ್ಚಾಗಿ ಗಾಬರಿ ಆಗುವುದು ನಾವು ಕಲ್ಪನೆ, ನೆನೆಯದೇ (ಕನಸು ಮನಸ್ಸಿನಲ್ಲೋ) ಮಾಡದ ಘಟನೆ, ಸನ್ನಿವೇಶಗಳು ನಡೆದಾಗ. ಒಂದು ಮಾತಿನಲ್ಲಿ ಹೇಳುವುದಾದರೆ ಆಘಾತವಾದಾಗ ಯಾ ಅಂಥ ಸುದ್ದಿಗಳನ್ನು ಕೇಳಿದಾಗ ತುಂಬಾ ಗಾಬರಿಗೂ ಹಾಗೂ ಆಘಾತಕ್ಕೂ ಒಳಗಾಗುತ್ತೇವೆ. ಗಂಭೀರವಾಗಿ ತನು – ಮನಗಳಿಗೆ ತೆಗೆದುಕೊಂಡಾಗ ಅವ್ಯವಸ್ಥೆ ಆಗಲೂ ಸಾಧ್ಯ. ಏಕೆಂದರೆ ನಮ್ಮ ಯೋಚನೆ ಧನಾತ್ಮಕಕ್ಕಿಂತ ಋಣಾತ್ಮಕವಾಗಿರುತ್ತದೆ. ಪೆಟ್ಟಾಗಿರಬೇಕು ಎಂಬ ಯೋಚನೆಗಿಂತ ತೀವ್ರ ಪೆಟ್ಟು (ಗಂಭೀರ) ಹಾಗೂ ಪ್ರಾಣ ಹಾನಿಯ ಬಗ್ಗೆಯೂ ಚಿಂತೆ ಮಾಡುತ್ತೇವೆ.

ಪ್ರತಿ ಸಲ ಕ್ಷಣ–ಕ್ಷಣಕ್ಕೂ ಗಾಬರಿ ಒಳಗಾಗುವುದು ನಮ್ಮ ಮೂರ್ಖತನ ಎಂದರೂ ಅತಿಶಯೋಕ್ತಿ ಆಗಲಾರದು! ಪರಿಶೀಲನೆ –ಪರಾಮರ್ಶೆ ಮುಖ್ಯ! ಅವಲೋಕನ, ಮಂಥನ ಅಷ್ಟೆ ಮುಖ್ಯ. ಸದಾ ಚಿಕ್ಕ – ಚಿಕ್ಕ ವಿಚಾರಗಳಿಗೆ ಗಾಬರಿಗೆ ಒಳಗಾಗುವವರಲ್ಲಿ ಸೂಕ್ಷ್ಮ ವಿಷಯಗಳನ್ನು ಬಹಳ ಸಮಾಧಾನದಿಂದ ಹೇಳಬೇಕಾಗುತ್ತದೆ. ಆವೇಶ–ಗಾಬರಿ ಹಾಗೂ ಯಾವ ನಿಯಂತ್ರಣ ಇಲ್ಲದವರು ಕೇಳುವಾಗ ಬೇರೆ ರೀತಿಯಲ್ಲೇ ಕೇಳುತ್ತಾರೆ. ಅರ್ಥೈಸಿಕೊಳ್ಳುವುದರಲ್ಲಿ ವಿಫಲರಾಗುತ್ತಾರೆ. ಎಚ್ಚರಿಕೆ, ಜಾಗೃತೆ ಮುಖ್ಯ. ಭಯ, ಆತಂಕಕ್ಕೂ, ಆಕ್ರೋಶಕ್ಕೂ ಕಾರಣ ಆಗಬಹುದು.

ಗಾಬರಿಯಿಂದ ಅನಾಹುತ ಆಗಲೂಬಹುದು. ಅಲ್ಲಿ ಸಣ್ಣ–ಪುಟ್ಟ ಘಟನೆ ಜರುಗಿದರೂ ಆಗಬಾರದು ಆಗಿಹೋಗಿದೆ ಎಂದು ಭಾವಿಸಿ ತಮಗೂ ಅಥವಾ ಸಂಸಾರಕ್ಕೋ, ಆಸ್ತಿ – ಪಾಸ್ತಿಗೂ ಮಾರಕವಾಗುವ ವರ್ತನೆ ಮಾಡುತ್ತಾರೆ. ಕೆಟ್ಟ ನಿರ್ಧಾರ ತೆಗೆದುಕೊಳ್ಳುತ್ತಾರೆ. ಪ್ರಾಣ ಹಾನಿ ಮಾಡಿಕೊಳ್ಳುತ್ತಾರೆ. ಇಂಥ ಸುದ್ದಿಗಳನ್ನು ದೈನಂದಿನ ಪ್ರಚಾರ – ಪ್ರಸಾರದಿಂದ ಕೇಳುತ್ತೇವೆ. ಕೆಲವೊಂದು ಅಹಿತಕರ ಘಟನೆಗಳು ಕಣ್ಮುಂದೆ ನಡೆಯುತ್ತಿರುತ್ತದೆ.

ನಮ್ಮ ಹೃದಯ ಎಲ್ಲಾ ಸ್ವೀಕರಿಸುವ–ಕರಗಿಸಿಕೊಳ್ಳುವ ಶಕ್ತಿ ಎಂದೆಂದೂ ಇರಬೇಕು. ಗಾಬರಿಯಾಗುವುದು ಮತ್ತು ಬೆಚ್ಚಿ ಬೀಳುವುದು ನಮ್ಮ ಗುಣ! ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗಲೋ ಅಥವಾ ವೈದ್ಯರು ಪರೀಕ್ಷೆ ಮಾಡುವಾಗ ಗುಣವಾಗದ ರೋಗ ಇದ್ದರೋ ರೋಗಿಗಳಲ್ಲೋ ಯಾ ಅವರ ಸಂಬಂಧಿಕರಲ್ಲಿ ನೇರವಾಗಿ (ರೋಗದ ಬಗ್ಗೆ) ಹೇಳುವುದಿಲ್ಲ. ಏಕೆಂದರೆ ಗಾಬರಿಯಾಗುತ್ತಾರೆ (ರೋಗ ಉಲ್ಬಣಿಸಬಹುದು, ಮರಣ ಹೊಂದಲೂಬಹುದು ಆ ರೋಗಿ) ಎಂಬ ಕಾರಣಕ್ಕಾಗಿ ಹಾಗೂ ಏನಾದರೂ ಅನಾಹುತ ಆಗಲೂಬಹುದು. ಒಮ್ಮೆಲೆ ಆಶ್ಚರ್ಯಕರ, ಆಘಾತಕಾರಿ ಅಥವಾ ಖೇದಕರ ಸುದ್ದಿ ಹೇಳುವಾಗ ಅದಕ್ಕೆ ಬೇಕಾದ ಮುಂದಾಲೋಚನೆ ವೈದ್ಯರಿಗೆ ಇರುತ್ತದೆ. ತೀರಾ ಸಮಾಧಾನಕರವಾಗಿ ಮತ್ತು ಆ ರೋಗ ಅಷ್ಟೊಂದು ಅಪಾಯಕಾರಿ ಅಲ್ಲ ಎಂಬ ರೀತಿಯಲ್ಲೋ ಹೇಳಬಹುದು. ಇಲ್ಲವೇ ನೇರವಾಗಿ ವೈದ್ಯರು ಹೇಳಬಹುದು. ಯಾವ ಮುಚ್ಚು ಮರೆ (ರೋಗದ ಬಗ್ಗೆ, ರೋಗಿಯ ಬಗ್ಗೆ) ಇಲ್ಲದೇ ಹೇಳಬಹುದು. ಆತಂಕ–ಆತುರ ಪಡೆಯುವುದು ಒಳ್ಳೆಯದಲ್ಲ. ಕೆಲವರು ಫೋನ್ ಬಂದರೆ ಗಾಬರಿಯಾಗುತ್ತಾರೆ.

ಆಕಸ್ಮಿಕವಾಗಿಯೋ, ಅನಿರೀಕ್ಷಿತವಾಗಿಯೋ ಹರಿದಾಡುವ ಹಾವುಗಳನ್ನು ನೋಡಿ ಬೆಚ್ಚಿ ಬೀಳುತ್ತೇವೆ. ಕೊನೆ ಮಾತು; ಗಾಬರಿಯಾಗುವುದು ಯಾವತ್ತೂ ಒಳ್ಳೇದಲ್ಲ. ಪರಿಶೀಲನೆ, ಪರಾಮರ್ಶೆ, ಅವಲೋಕನ ಮತ್ತು ವಿಷಯಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಆವಾಗ ಕೊಂಚ ಗಾಬರಿಗೊಳ್ಳುವುದು ತಪ್ಪಲ್ಲ. ಎಲ್ಲದಕ್ಕೂ ಕಂಗಾಲಾಗುವುದು ಆರೋಗ್ಯಕ್ಕೆ ಅಲ್ಲದೆ ಹೃದಯಕ್ಕೂ ಹಾನಿಯೂ ಉಂಟು. ಧೃತಿಗೆಡಬಾರದು. ಗಾಬರಿಯಾದಾಗ ಬೇರೆಯವರು ಸಮಾಧಾನಿಸುವುದು ಒಳ್ಳೆಯದು. ದೇಹ ನಿಶ್ಶಕ್ತತೆಯನ್ನುಪಡೆಯುತ್ತದೆ ಗಾಬರಿಯಾದಾಗ. ಕೇಳಿದ್ದನ್ನು ಕಣ್ಣಾರೆ, ಕಿವಿಯಾರೆ ಕೇಳಿ ಸಂಪೂರ್ಣ ಮಾಹಿತಿ ಪಡೆದುಕೊಂಡು ನಿರ್ಧಾರ, ತೀರ್ಮಾನ ಕೈಗೊಳ್ಳಬೇಕು. ಮಕ್ಕಳನ್ನು ಗಾಬರಿಗೊಳಿಸಬಾರದು. ಮಂಥನ–ಚರ್ಚೆ, ಚಿಂತನೆ ಮುಖ್ಯ ಅಲ್ಲವೇ?.

# Tulu Nadu: A Tapestry of Culture, Language and Tradition



Dr. Santosh Shetty

Tulu language is predominantly spoken by the Tulu people, also known as Tuluvas, who reside in a region referred to as Tulu Nadu, situated on the southwest coast of Bharat. Tulu is a member of the Dravidian language family, yet it possesses numerous idiosyncrasies not encountered in other Dravidian languages. The earliest potential reference to Tulu Nadu can be traced back to the Ashokan edicts from the third century BCE. The precise date of the Dravidian languages' introduction to our country remains uncertain, with some scholars postulating their indigenous origins in the country. Certain academics propose that the language of the Indus Civilization, which thrived in the north-western part of the subcontinent around 2500 BCE, might have been of Dravidian origin, though this topic remains a subject of ongoing debate.

The Tulu people had their own kingdom, known as the Alvakheda kingdom, under the rule of the Alupa dynasty, which extended from around the 2nd to the 15th century CE. Initially, the Alupas ruled independently, but as time passed, they became vassals to other ruling dynasties while retaining a considerable degree of self- governance. The Kadambas were the first among these dynasties. The Alvakheda kingdom enjoyed its independence until the Vijayanagara Empire assumed control of the region in 1336 CE. The Vijayanagara Empire reaped significant benefits from its governance of Tulu Nadu, as it facilitated foreign trade and ensured internal security. This had a profound impact on Tulu Nadu, resulting in the migration of various communities to the area. The region witnessed economic prosperity, the establishment of political order, religious transformations, and other substantial changes.

After the Vijayanagara Empire's decline in 1600 CE, the Nayakas assumed control, leading to a period of political instability and unrest in Tulu Nadu. As a consequence of this tumultuous era, the Sultans of Mysore briefly occupied the region before it was ultimately completely annexed by the British in 1801 CE. An inscription dating back to 1346 CE, discovered in Bhatkal, mentions that the Alvakheda kingdom, in the 2nd century CE, was home to speakers of the Tulu language. Following our country’s attainment of independence from the British, Tulu Nadu was partitioned into three districts, with two situated in Karnataka and one in Kerala. Consequently, Tulu Nadu is presently not administered as a single, unified administrative entity.

The distinctive cultural practices and linguistic uniformity of Tulu Nadu can be traced back to its geographical isolation. Tulu Nadu is encompassed by natural boundaries, with the sea to the west, mountains to the east, and rivers to the north and south. This geographical isolation has played a critical role in the development and preservation of Tulu Nadu's unique cultural identity, which encompasses a harmonious blend of Vedic and Dravidian influences. These cultural amalgamations are fundamental to the region's character and contribute significantly to its rich cultural heritage. Moreover, Tulu Nadu's isolation has enabled the perpetuation of traditional cultural

customs, as external influences on the region have been limited. This isolation has, in turn, safeguarded the region's cultural heritage from substantial changes over time.

In Tulu Nadu, the Aliya Santana (literally "son-in-law as heir") inheritance system, also known as the matrilineal system, is followed by all Hindus except for the Brahmins. Under this system, a person's community, gods, possessions, and kinship are inherited from their mother's side of the family. It is believed to have been influenced by the region's history of matrilocal residence and the importance of the mother's kin in social and economic matters. This system is still followed by most communities in Tulu Nadu today and continues to shape the social and familial relationships within these communities.

Tulu Nadu is a region that boasts a diverse amalgamation of both non-Vedic and Vedic religious traditions coexisting side by side. Within this cultural tapestry, the inhabitants of Tulu Nadu engage in a multifaceted approach to spirituality, offering prayers to Vedic deities, worshipping, and celebrating local daivas, and faithfully upholding age-old practices such as ancestral worship and the Naga worship. The significance of snake worship, in particular, is paramount in Tulu Nadu, with certain groves designated as sacred sites across various communities. This deep-rooted reverence for serpents manifests through two distinctive forms of Naga dance known as Naga-mandala and Dakke-bali, which are unique to the region.

The Tulu language and culture have a rich and unique heritage. The Tulu people have their own distinct customs, traditions, and folklore that are closely associated with the language. This cultural richness is a testament to the originality of the Tulu culture and language. Much of Tulu's cultural and historical knowledge has been transmitted through oral traditions. Tulu folklore, storytelling, and folk songs have played a significant role in preserving the language's originality and cultural identity. In recent times, there has been a revival of interest in the Tulu language, and efforts have been made to promote and preserve it. Tulu language activists and scholars are working on documenting and standardizing the language.

Tulu language is not just a means of communication but also repository of the unique culture, traditions, and history of the Tulu- speaking people. It carries the collective wisdom and identity of the community, which is essential to safeguard future generations. Therefore, preserving the Tulu language is crucial not only for the Tulu-speaking community but also for the world's cultural and linguistic diversity. It ensures that the rich heritage, unique identity, and cultural expressions of the Tulu people continue to thrive and be celebrated.

# Congratulations



Master Siddhanth Poonja S/o Deviprasad Poonja and Deeksha Poonja of Sindhi High School Kempapura, Hebbal is the State Chess Champion U-17 and U-13 category. He is also National U-11 2023 First Runner up held at Vishakapatnam. Bunts Sangha Bangalore congratulates and wishes him all the best.

# A SWEET RESOLVE FOR YOUR 'SUGAR PROBLEMS'



Dr. Shalmalee

The title is quite an oxymoron, isn't it? Diabetes, having a 'sweet' resolve?

As I pondered on what article I could write this month, it occurred to me - As we celebrate World Diabetes Day, (November 14th) I thought it would only be apt to throw light on how we can (or help our loved ones with diabetes) keep a check on their sugar levels, safely. Diabetes can be kept in check in a manner that is holistic, sans side effects in the form of Homoeopathy. If you haven't tried it, or if you have second thoughts on its efficiency, this article is just for you.

So, let's begin. I've always believed that the first step to managing any condition is acquiring knowledge of what it is.

To start with, what exactly is Diabetes? To put it very simply, it is a condition, where the sugar levels in our blood stream are very high.

Here's how our blood sugar levels are normally controlled –
The food we eat, is broken down into blood sugar. This blood sugar enters our bloodstream which signals our pancreas. Our pancreas, produces a hormone called Insulin. This insulin is what is responsible for reducing the sugar levels in our blood stream. It does so by –

a) Helping our cells absorb this sugar (in the form of glucose) so that they get energy thereby balancing the sugar level in the bloodstream

b) Signaling to the Liver to store blood sugar for later use. That is where you get your energy from, even if you haven't eaten for a while.

So, what happens when one has diabetes?

Type 1 diabetes -
This is autoimmune; our immune system attacks the insulin producing cells in the body for no known reasons. Thus, pancreas don't produce enough insulin to reduce the amount of blood sugar in the bloodstream – results in its increase – type 1 diabetes. This is usually diagnosed in children or young adults.

Type 2 diabetes -
The most common type. This one, can be caused due to two reasons. a) The pancreas become faulty and do not produce enough insulin, thus there is an increase in the amount of sugar levels. b) The cells become insulin resistant, and stop absorbing the glucose, once again that causes an increase in the sugar level in the bloodstream.

While the exact cause is not known, there are few risk factors to be aware of like having no enough physical activity, obesity, having a family history of type 2 diabetes, having prediabetes, an unhealthy lifestyle and so on.

So, now that we have an idea as to what causes it, lets jump straight to the management part.

Keeping your blood sugar levels in check sustainably will happen only when apart from the medication, one takes the right food and follows a healthy physical and mental lifestyle. Regular exercise, keeping stress in check, consuming a balanced diet is a must. Along with that, depending on the severity of your diabetes, medication will be needed; with that,

comes my role of explaining to you how we homoeopaths can help you.

Homoeopathy provides a complementary approach to management of diabetes. We consider the unique symptoms, characteristics and imbalances to promote overall well-being of the person. We ask you questions about your lifestyle, diet, family history, your stress levels and other possible factors that may have spiked your sugar levels and then form a whole picture and treat you based on that, which makes Homoeopathy an effectual treatment as it follows a holistic approach. Thus, no two people will get the same medicine though they are both suffering with diabetes. Along with that, no side effects, is always a bonus of course.

We in homoeopathy usually give medicines in the form of medicated pills (depends on your physician) that are slightly sweet (thus a favorite amongst children) and that is where most of them place their fears. I've had at least one in every five diabetic patients ask me if the sweet medicated pills we prescribe increase their sugar levels rather than keeping it in check. Not only have I cleared their doubts with explanation and results, but also thank them for voicing their fears as that is what let me know that this is a topic that has to be thrown light upon so that it helps others with the same kind of questions.

When we dispense our medicines, we use 'globules' - in other words, the pills, that are made of sucrose, as the vehicle; we add medicine in the pills and give them to you. Now, to break it down with factual calculations, even a patient with severe diabetes, is allowed a teaspoon of sugar per day. A teaspoon of sugar contains around 4.2 grams of sucrose. In the case of the homoeopathy pills that we administer, we ask patients to take 3-5 pills (depending on the size) and this contains around 1 gram of sucrose. Thus, the homoeopathic pills, contain way less amount of sugar than the per day allowance even in a case of severe diabetes, thus, rendering it safe even for patients with very high sugar levels.

To make it simpler, the amount of sucrose in the pills we give you for a month, is almost equal to one-fourth a bread. Thus, it is equal to consuming one-fourth a piece of bread for a month, which is definitely safe.

Hence homoeopathic medicines, though sweet, are very safe and effective in consuming in order to keep your sugar levels in control.

I hope with this article I have cleared your doubts and conveyed to you how homoeopathy can help keep your diabetes in control and achieve your best state of health. Here's wishing all those (or your loved ones) having the sugars, a sweet and a holistic healing.

# Congratulations



It's a proud moment to inform you all that, Sujal J. Shetty daughter of Jayakar Shetty and Sunitha Shetty has bagged a gold medal in the International Karate Championship (Bali Budang Open International Championship) held in Bali Indonesia from 19th to 23rd October. This is a proud moment for our country because Bharath has bagged gold. She is a student of Universal school of administration and an old student of Bunts' Sangha RNS Vidyaniketan. Bunts Sangha Bangalore congratulates and wishes her all the best.

# A REPORT ON STUDENTS DEVELOPMENT PROGRAMME

## Topic: " Know Your Self - Motivational Talk"




BSRNS Evening College has taken initiation to conduct the Students Development Programme with an intention of improvising the students' career development.

The Programme was well prepared, planned and executed by our expert Sri. Col. S M Vali - An Alumni of Indian Military Academy, Dehradun. The Programme was executed under three phases

Phase 1 – Significance of "Knowing yourself"
Phase 2 – How to know yourself
Phase 3 – From the students point of view

The importance of understanding the above said topic has been reinforced in many students in their career as well as life style over decades throughout the world as a means of Personality Development.

Acquiring the knowledge as a part of motivation has naturally enhanced "VALUES" which speaks on Vision, Attitude, Language usage, Effectiveness and Smartness in shaping the Personality.

Gradually, the Programme focuses on reading, listening, and speaking. The problem is, however, the way to think, teach, analyse technique, to show the talent and improving the communication skills.

Mentoring is one of the institutional concept which enhances the students' skill and ability in presenting themselves and helps in enhancing results.

This Programme also emphasizes on "right person for the right job at the right time in the right place" which provokes students to focus on challenging tasks under different situations of work environment.

To sum up, the Programme was executed by an expert with a lot of interaction with students with live examples which inturn helps the students to plan for their career.

**" BEFORE FACING CHALLENGES - KNOW YOURSELF "**

# ಬಂಟರ ಸಂಘ ಬೆಂಗಳೂರು– ಮಹಿಳಾ ವಿಭಾಗ

## ದಸರಾ ಆಚರಣೆ

ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗದ ವತಿಯಿಂದ ದಿನಾಂಕ 21.10.2023ರಂದು ದಸರಾ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಹಿರಿಯರು ಕಿರಿಯರು ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿಯವರು ಎಲ್ಲರನ್ನೂ ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು, ಗೌರವ ಕಾರ್ಯದರ್ಶಿ ಶ್ರೀ ಬಿ. ಆನಂದರಾಮ ಶೆಟ್ಟಿಯವರು, ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಗೀತಾಂಜಲಿ ಡಿ. ಅಜಿಲರವರು, ಜೊತೆ ಕಾರ್ಯದರ್ಶಿ ಶ್ರೀಮತಿ ಶ್ಯಾಮಲ ಶೆಟ್ಟಿಯವರು ಹಾಗೂ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿಯವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾರ್ಥನೆ, ಭಜನೆ, ಲಲಿತ ಸಹಸ್ರನಾಮ, ದೇವಿ ಪೂಜೆ, ದಾಂಡಿಯಾ ನೃತ್ಯ ಎಲ್ಲವೂ ಸುಂದರವಾಗಿ ಮೂಡಿಬಂತು. ಶ್ರೀಮತಿ ಅಮೃತ ವಿಜಯ ಶೆಟ್ಟಿಯವರು ಇತರ ಮಹಿಳೆಯರೊಂದಿಗೆ ದೇವಿಯ ಅಲಂಕಾರವನ್ನು ಮಾಡಿದರು. ಶ್ರೀಮತಿ ಜಯಲಕ್ಷ್ಮಿ ಶೆಟ್ಟಿಯವರು ಕಾರ್ಯಕ್ರಮದ ನಿರೂಪಣೆಯನ್ನು ಉತ್ತಮವಾಗಿ ಮಾಡಿದರು.

ಭಕ್ತಾಧಿಗಳಿಗೆ ಪ್ರಸಾದವನ್ನು ನೀಡಿದ ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿಯವರಿಗೆ ಹಾಗೂ ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿಯವರಿಗೆ ಹಾಗೂ ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**ಮಾಲತಿ ಜೆ. ಶೆಟ್ಟಿ**
ಚೇರ್‌ಪರ್ಸನ್, ಮಹಿಳಾ ವಿಭಾಗ

---

ಬಂಟರ ಸಂಘ ಬೆಂಗಳೂರು

# ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ–ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ. ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ. ವಾಲ್ತೂರು**
ಸಂಚಾಲಕರು, ಬಂಟ್ಸ್ ಸೇವಾದಳ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

ಬಂಟರ ಸಂಘ ಬೆಂಗಳೂರು

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಆತ್ಮೀಯ ಸಮಾಜ ಬಾಂಧವರೇ,**

**ಸಂಘದ 2023–24 ನೇ ಸಾಲಿನ ಈ ಕೆಳಗಿನ ವಿವಿಧ ದತ್ತಿ ನಿಧಿ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.**

1. ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'**
2. ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'**
3. ಶ್ರೀ ಮುಲ್ಕಿ ಸುಂದರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವಾಣಿಜ್ಯ ವಿದ್ಯಾರ್ಥಿ'**
4. ಶ್ರೀಮತಿ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಸರ್ವತೋಮುಖ ಪ್ರತಿಭಾನ್ವಿತ ವಿದ್ಯಾರ್ಥಿನಿ'**
5. ಶ್ರೀ ಚಾರ್ಮಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ಕಾನೂನು ವಿದ್ಯಾರ್ಥಿ'**
6. ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ದಂತ ವೈದ್ಯಕೀಯ ವಿದ್ಯಾರ್ಥಿ'**
7. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ – **ಅತ್ಯುತ್ತಮ ಬಿ.ಎಸ್ಸಿ. (ಕೃಷಿ)/ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ**
8. ಶ್ರೀ ಎಚ್.ಟಿ. ಭಂಡಾರಿ ಪ್ರಶಸ್ತಿ – **'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'**
9. ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ – **ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ**
10. ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ– **'ವಿವಿಧ ಕ್ಷೇತ್ರದಲ್ಲಿನ ಸರ್ವತೋಮುಖ ಪ್ರತಿಭೆ'** ಗಾಗಿ (ವಿದ್ಯಾರ್ಥಿನಿ)
11. ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಬಿ.ಇ.'** (ಎಲೆಕ್ಟ್ರಾನಿಕ್ಸ್) **ಅಥವಾ ಇತರೆ ವಿಷಯದಲ್ಲಿ 'ಇಂಜಿನಿಯರಿಂಗ್ ಪದವಿ'.**
12. ರಕ್ಷಾ ರೈ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ**
13. ಮುಲ್ಲದ್ ಲಕ್ಷ್ಮೀ ಶೀನಪ್ಪ ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ಪಶು ವಿಜ್ಞಾನ ವಿದ್ಯಾರ್ಥಿ'** ಅಥವಾ **'ಪಶುವಿಜ್ಞಾನ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ.**
14. ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'.**
15. ಶ್ರೀ ಮಾರಾಳಿಮನೆ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ– **'ಅತ್ಯುತ್ತಮ ನೇತ್ರ ವೈದ್ಯ'** ಅಥವಾ **'ಯಾವುದೇ ವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ'.**
16. ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ನೃತ್ಯ'** ದಲ್ಲಿನ ವಿಶೇಷ ಸಾಧನೆಗಾಗಿ.
17. ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಕಾನೂನು ವಿದ್ಯಾರ್ಥಿ'.**
18. ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'.**
19. ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'.**
20. ವಂಡಾರು ತೆಂಕಬೆಟ್ಟು ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – **ವಾಣಿಜ್ಯ ವಿಷಯದಲ್ಲಿ ಪದವಿ ಗಳಿಸಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ ವಿದ್ಯಾರ್ಥಿನಿ.**
21. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿನ ವಿಶೇಷ ಸಾಧನೆಗಾಗಿ.**
22. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ಕಲೆ, ಸಂಗೀತ, ನೃತ್ಯ, ಯಕ್ಷಗಾನ, ನಾಟಕ ಇತ್ಯಾದಿ ವಿಭಾಗಗಳಲ್ಲಿ ವಿಶೇಷ ಸಾಧನೆಗಾಗಿ.**
23. ದಿ। ಡಾ। ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ಕ್ರೀಡೆ, ಯೋಗ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ.**

24. ಶ್ರೀ ಕಿಶನ್ ಜಲಾಧರ ಶೆಟ್ಟಿ ಪ್ರಶಸ್ತಿ **ಅತ್ಯುತ್ತಮ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಅಥವಾ ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ.**
25. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – **ಎಸ್.ಎಸ್.ಎಲ್.ಸಿ/ 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ.**
26. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ– **ದ್ವಿತೀಯ ಪಿಯುಸಿ/ 12ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ.**
27. ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ ಸ್ಮಾರಕ ನಗದು ಪ್ರಶಸ್ತಿ – **ಪಿಯುಸಿ, ಪದವಿ ಅಥವಾ ಇನ್ಯಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ (3 ಪ್ರಶಸ್ತಿಗಳು).**
28. ದಿ। ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – **ಪಿ.ಯು.ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ. (4 ಪ್ರಶಸ್ತಿಗಳು).**
29. ದಿ। ಕೆ. ಎಸ್ ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ – **ಪಿ.ಯು.ಸಿ, ಪದವಿ ಅಥವಾ ಇನ್ಯಾವುದೇ ಶಿಕ್ಷಣ ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ – (2 ಪ್ರಶಸ್ತಿಗಳು).**
30. ಬ್ರಹ್ಮಾವರ ತೆಂಕುಮನೆ ದಿ. ಡಾ. ಬಿ. ರಾಘವ ಶೆಟ್ಟಿ ಸ್ಮಾರಕ ಪ್ರಶಸ್ತಿ – **ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಬಂಟ ಸಮುದಾಯದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ.**

ಪ್ರಸಕ್ತ ಸಾಲಿನಲ್ಲಿ ಶಿಕ್ಷಣವನ್ನು ಪೂರೈಸಿದ ಈ ಮೇಲಿನ ಯಾವುದೇ ಪ್ರಶಸ್ತಿಗೆ ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿಯ ಪ್ರತಿ, ಇತ್ತೀಚಿನ ಭಾವಚಿತ್ರ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ದಿನಾಂಕ 31.12.2023 ರ ಒಳಗಾಗಿ ಸಂಘದ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2024 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**ಆನಂದರಾಮ ಶೆಟ್ಟಿ ಬಿ.**
**ಗೌರವ ಕಾರ್ಯದರ್ಶಿ**

**ಅಜಿತ್ ಶೆಟ್ಟಿ**
ಸಂಚಾಲಕರು,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
**ಸದಾನಂದ ಸುಲಾಯ**
ಚೇರ್‌ಪರ್ಸನ್,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ಸದಸ್ಯರು**

# Bangalore Bunts Sangha Participants in World Bunts Meet

The Cultural Wing and Sports Committee have participated in World Bunts Meet, organized by the Federation of World Bunts Association at Udupi on 28th and 29th October. Our members participated in rally from Udupi Board High School to Ajjarakad. Our members along with office bearers and EC members of Bangalore Bunts Sangha took part in March Past.

Sports Committee members participated in Sports and games competitions and bagged 2nd prize in Kabadi, while cultural team presented a beautiful dance programme and bagged 3rd prize. Congratulations to all participants.

**BUNTS' SANGHA BENGALURU**
No.324, Chord Road, Vijayanagar, Bengaluru – 560 040.
Tel. : 080–23399323 / 23399635 / 23399636

Applicant Photo

## Application for Endowment Award
## ದತ್ತಿ ನಿಧಿ ಪ್ರಶಸ್ತಿಗೆ ಅರ್ಜಿ

To,
Date :
The Hon. Secretary
Bunts' Sangha Bangalore

**Sir/ ಮಾನ್ಯರೇ,**
I/ We request you to consider my application for Endowment Award/ ದತ್ತಿ ನಿಧಿ ಪ್ರಶಸ್ತಿಗೆ ನನ್ನ ಅರ್ಜಿಯನ್ನು ಪರಿಗಣಿಸಲು ಮನವಿ.

| | |
|---|---|
| 1.Name of the Applicant | |
| 2.Date of Birth of the Applicant | |
| 3. Contact No. | |
| 4. Father Name | |
| 5. Mother Name | |
| 6. Address | |

| |
|---|
| 7. Details of Education qualification of Applicant: |
| Name of the Award applied for: |
| Achievements: |

| | | |
|---|---|---|
| Deatails of Applicants Bank A/c / ಅಭ್ಯರ್ಥಿಯ ಬ್ಯಾಂಕ್ ಖಾತೆಯ ವಿವರಗಳು | A/c Holders Name / ಖಾತೆದಾರರ ಹೆಸರು | |
| | A/c No. ಖಾತೆ ಸಂಖ್ಯೆ | |
| | Name of the Bank / ಬ್ಯಾಂಕ್ ನ ಹೆಸರು | |
| | Branch/ ಶಾಖೆ | |
| | IFSC Code/ ಐಫ್.ಎಸ್.ಸಿ. ಕೋಡ್ | |

| | | |
|---|---|---|
| **Signature of Applicant** **ಅಭ್ಯರ್ಥಿಯ ಸಹಿ** | **For office use** | **Chairman,** Scholarship & Awards |

# Creating life - long bonds
## Since 20 Years

HOME FOR ALL

BUDGET FLATS 18 LAKHS ONWARDS
COST INCLUDING GST
JUST PAY ₹50K
